# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## G and W: 33/2023

ಸಾಕ್ಷಿಯನ್ನು ದಿಃ **05.12.2024** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

ಹೆಸರು ಶಿವರಾಜು ಎಲ್.ಎಸ್ ಪಿ.ಡಬ್ಲ್ಯೂಃ **1**
ತಂದೆಯ ಹೆಸರು ಸಣ್ಣತಮ್ಮೇಗೌಡ
ವಯಸ್ಸು 30 ವರ್ಷ
ಕೆಲಸ ವ್ಯವಸಾಯ
ವಾಸಸ್ಥಳ ಲಕ್ಕನಕೊಪ್ಪಲು

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ-

ಈ ಅರ್ಜಿಯನ್ನು ನನ್ನ ಮಗಳು ತನ್ವಿಕಾ .ಎಸ್ ರವರನ್ನು ನನ್ನ ಸುಪರ್ದಿಗೆ ನೀಡಬೇಕು ಎಂದು ಸಲ್ಲಿಸಿದ್ದೇನೆ. ನನ್ನ ಮದುವೆ **2021** ರಲ್ಲಿ 1 ನೇ ಎದುರುದಾರರ ಮಗಳಾದ ಕಲ್ಪನಾ ರವರ ಜೊತೆಯಲ್ಲಿ ಮಾರಗೌಡನ ಹಳ್ಳಿ ಬಸವೇಶ್ವರ ದೇವಸ್ಥಾನದಲ್ಲಿ ಆಗಿತ್ತು. ಮದುವೆ ನಂತರ ನಾನು ಮತ್ತು ನನ್ನ ಪತ್ನಿ ನನ್ನ ಗ್ರಾಮವಾದ ಲಕ್ಕನಕೊಪ್ಪಲಿನಲ್ಲಿ ನನ್ನ ತಂದೆ ತಾಯಿಯೊಂದಿಗೆ ನಮ್ಮ ಮನೆಯಲ್ಲಿ 1 ವರ್ಷದಕಾಲ ದಾಂಪತ್ಯ ಜೀವನ ನಡೆಸಿರುತ್ತೇವೆ. ನಮ್ಮ ದಾಂಪತ್ಯ ಜೀವನದಿಂದ ದಿಃ 25.01.2022 ರಂದು ನಮಗೆ ಒಂದು ಹೆಣ್ಣು ಮಗು ಕೆ.ಆರ್ ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಜನಿಸಿತು. ಬಾಣಂತನದ ಸಲುವಾಗಿ ನನ್ನ ಪತ್ನಿ ಅವರ ಊರಾದ ಮಾರಗೌಡನಹಳ್ಳಿಯಲ್ಲಿ ಸುಮಾರು 6 ತಿಂಗಳ ಕಾಲ ಮಗುವಿನೊಂದಿಗೆ ಆರೈಕೆಗಾಗಿ ಇದ್ದರು. ಆನಂತರ ನನ್ನ ಪತ್ನಿ ಮತ್ತು ಮಗುವನ್ನು ನಮ್ಮ ಲಕ್ಕನಕೊಪ್ಪಲು ಗ್ರಾಮದ ಮನೆಗೆ ಕರೆದುಕೊಂಡು ಬಂದೇವು. ಆನಂತರ ದಿಃ 06.07.2022 ರಂದು ನನ್ನ ಪತ್ನಿ ಕಲ್ಪನಾ ರವರ ಅನಾರೋಗ್ಯದಿಂದ ಮೃತ ಪಟ್ಟಿರುತ್ತಾರೆ. ಏನು ಕಾಯಿಲೆ ಆಗಿತ್ತು ಎಂದರೆ ಸಾಕ್ಷಿ ಯಾವ ಕಾಯಿಲೆ ಆಗಿತ್ತು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆನಂತರದಲ್ಲಿ ನನ್ನ ಮಗುವನ್ನು ನನ್ನ ಪತ್ನಿಯ ತಂದೆ ತಾಯಿ ತಮ್ಮೊಂದಿಗೆ ತೆಗೆದುಕೊಂಡು ಹೋದರು, ಆದರೆ ಅವರು ನನ್ನ ಮಗುವನ್ನು ಚೆನ್ನಾಗಿ ಪಾಲನೆ ಪೋಷಣೆ ಮಾಡುತ್ತಿಲ್ಲ. ಆದ್ದರಿಂದ ಮಗುವನ್ನು ನನ್ನ ಕಸ್ಟಡಿಗೆ ಕೊಡಬೇಕು ಎಂದು ಕೇಳಿ ಈ ಅರ್ಜಿಯನ್ನು ಹೂಡಿರುತ್ತೇನೆ. ಮಗುವನ್ನು ನನ್ನ ಸುಪರ್ದಿಗೆ ನೀಡದಿದ್ದಲ್ಲಿ ತಾಯಿ ಪ್ರೀತಿ ಇಲ್ಲದ ಮಗುವಿಗೆ ತಂದೆಯ ಪ್ರೀತಿ ಕೂಡ ದಕ್ಕದಂತೆ ಆಗುತ್ತದೆ

ಮತ್ತು ಅದರ ಪಾಲನೆ, ಪೋಷಣೆ, ವಿದ್ಯಾಭ್ಯಾಸಕ್ಕೂ ಕೂಡ ತೊಂದರೆ ಆಗುತ್ತದೆ. ನನ್ನ ಮಗುವನ್ನು ನನ್ನ ಕಸ್ಟಡಿಗೆ ನೀಡಿದರೆ ನಾನು ಮಗುವನ್ನು ಪ್ರೀತಿಯಿಂದ ಪಾಲನೆ ಮಾಡುತ್ತೇನೆ. ಆದುದರಿಂದ ನಾನು ಅರ್ಜಿಯಲ್ಲಿ ಬೇಡಿದಂತೆ ಪರಿಹಾರ ಕೋರುತ್ತೇನೆ. ನನ್ನ ಅರ್ಜಿಯೊಂದಿಗೆ ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.

| | |
|---|---|
| ನಿಪಿ.1 | ಮಗುವಿನ ಜನನ ಪ್ರಮಾಣ ಪತ್ರ |
| ನಿಪಿ.2 | ಕಲ್ಪನಾ ರವರ ಮರಣ ಪ್ರಮಾಣ ಪತ್ರ |

ಪಾಟೀಸವಾಲು: ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.